## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಂ.ಆರ್.ವಡ್ಡರ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಮತ್ತು ಇತರೆ ಇಬ್ಬರ ವಿರುದ್ಧದ ಆರೋಪಗಳಿಗೆ ಸಂಬಂದಿಸಿದಂತೆ ಮಾನ್ಯ ಉಪಲೋಕಾಯುಕ್ತರ ಕಲಂ 12 (3) ರವರ ವರದಿ, ವಿವರವಾದ ಇಲಾಖಾ ವಿಚಾರಣೆಗೆ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1ರವರಿಗೆ ವಹಿಸುವ ಬಗ್ಗೆ- ಆದೇಶ.

**ಓದಲಾಗಿದೆ:**

| | |
|---|---|
| 3. | ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅ.ಸ.ಪ.ಸಂಖ್ಯೆ:ಕಂಪ್ಲೇಟ್/ಉಪಲೋಕ್/ಜಿ.ಎಲ್.ಬಿ/3654/2015//ಎಆರ್‌ಇ-3, ದಿನಾಂಕ:30.11.2016 |
| 4. | ಮಾನ್ಯ ಉಪ ಲೋಕಾಯುಕ್ತ-1ರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಕಂಪ್ಲೇಟ್/ಉಪಲೋಕ್/ ಜಿ.ಎಲ್.ಬಿ/3654/2015//ಎಆರ್‌ಇ-3, ದಿನಾಂಕ:16.11.2016 |

**ಪ್ರಸ್ತಾವನೆ:-,**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ:30.11.2016 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:16.11.2016ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ-1ರವರ ಕಲಂ 12(3) ರ ವರದಿಯನ್ನು ಹಾಗೂ ಅದರೊಂದಗಿನ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶ್ರೀ ಜಿ.ಎನ್.ಹನುಮಂತಪ್ಪ ತಂದೆ ಗುನ್ನಾಳ ನಾಗಪ್ಪ, ಒಂದನೇ ದರ್ಜೆ ಗುತ್ತಿಗೆದಾರರು ಗಂಗಾವತಿ ಇವರು ಗಂಗಾವತಿ ಮತ್ತು ಯಲಬುರ್ಗಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾದ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿ/ಹಣ ದುರುಪಯೋಗವಾಗಿರುತ್ತದೆ ಎಂದು ಇದಕ್ಕೆ (1) ಶ್ರೀ ಎಂ.ಆರ್.ವಡ್ಡರ, ಹಿಂದಿನ ಕಾ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ. (2) ಶ್ರೀ ಕೆ.ಬಿ.ಗಂಜಿಹಾಳ, ಸ.ಕಾ.ಇಂ, ಪಂ.ರಾ.ಇಂ ಉಪ ವಿಭಾಗ, ಯಲಬುರ್ಗಾ. ಮತ್ತು (3) ಶ್ರೀ ಎಂ.ಎಂ.ಪಾಟೀಲ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಬಾಗ, ಕೊಪ್ಪಳ ಇವರುಗಳು ಕಾರಣರಾಗಿರುತ್ತಾರೆಂದು ಆರೋಪಿಸಿ, ಮಾನ್ಯ ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿಗೆ ಸಂಬಂಧಿಸಿದಂತೆ ಮಾನ್ಯ ಉಪಲೋಕಾಯುಕ್ತರು ಕಲಂ 9 ರನ್ವಯ ತನಿಖೆ ಕೈಗೊಂಡಿದ್ದು, ಮೇಲ್ಕಂಡ ಮೂವರಿಂದ ವಿವರಣೆ ಪಡೆದಿರುತ್ತಾರೆ.

ಮೂವರು ಆರೋಪಿತರು ವಿವರಣೆ ಸಲ್ಲಿಸಿದ್ದು ಅವರ ವಿರುದ್ಧದ ಆರೋಪಗಳನ್ನು ನಿರಾಕರಿಸಿ, ಅಂದಾಜು ಪಟ್ಟಿಯನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ಉಸ್ತುವಾರಿ ಸಚಿವರು, ಶಾಸಕರು ಪರಿಶೀಲನೆ ನಡೆಸಿರುತ್ತಾರೆಂದು ಅಲ್ಲದೆ ರಾಜ್ಯ ಗುಣ ನಿಯಂತ್ರಣ ಅಧಿಕಾರಿ, ಮೂರನೇ ತನಿಖಾ ತಂಡದವರ ತಪಾಸಣೆ ನಡೆಸಿ ವರದಿ ಸಲ್ಲಿಸಿದ್ದು ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಂಡಿರುವ ಬಗ್ಗೆ ವರದಿ ಸಲ್ಲಿಸಿರುವ ಬಗ್ಗೆ ತಿಳಿಸಿ, ವಿವರಣೆ ಸಲ್ಲಿಸಿರುತ್ತಾರೆಂದು, ಅಪಾದಿತರು ಸಲ್ಲಿಸಿದ್ದ ವಿವರಣೆಯನ್ನು ದೂರುದಾರರಿಗೆ ಕಳುಹಿಸಿದ್ದು, ದೂರದಾರರು ಅದಕ್ಕೆ ಪ್ರತ್ಯುತ್ತರ ಹಾಗೂ ಕೆಳಕಂಡ ಕಾಮಗಾರಿಗಳ ಛಾಯಾ ಚಿತ್ರಗಳನ್ನು ಲಗತ್ತಿಸಿ, ಸಲ್ಲಿಸಿರುತ್ತಾರೆಂದು ವರದಿಯಲ್ಲಿ ತಿಳಿಸಲಾಗಿದೆ.

1. CC Road at Yadavatti village.
2. Kadi road from Katigalli Village to Chikkabommanal Village.

---2

3. CC road at Hunasihal Village
4. CC Road at Venkatgiri Village.
5. Improvement of road from herur Village to Doctor Camp road
6. CC road at Bhatranarasapura Village
7. Improvement of road from Adavibhavi Village Chikkathanda to Doddathanda.

ಮಾನ್ಯ ಉಪಲೋಕಾಯುಕ್ತ-1ರವರು ದೂರುದಾರರು ನೀಡಿದ ಪ್ರತ್ಯುತ್ತರ ಹಾಗೂ ಕಾಮಗಾರಿಗಳ ಛಾಯಾಚಿತ್ರಗಳನ್ನು ಪರಿಶೀಲಿಸಿ, ಮೇಲ್ಕಂಡ ಕಾಮಗಾರಿಗಳು ಕೆಳ ಮಟ್ಟದಲ್ಲಿ ನಿರ್ವಹಿಸಿದ್ದು, ಆರೋಪಿತರು ವಿವರಣೆಯಲ್ಲಿ ತಿಳಿಸಿರುವಂತೆ ಕಾಮಗಾರಿಗಳನ್ನು ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಪಂಚಾಯತ್ ಸದಸ್ಯರು ಖುದ್ದು ಪರಿಶೀಲನೆ ನಡೆಸಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವೆಂದು ಅಲ್ಲದೆ, ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ವಿವರಗಳು ಅಂದಾಜುಪಟ್ಟಿಗಳು ಅಳತೆ ಮಸ್ತಕಗಳನ್ನು ವಿವರಣೆಯೊಂದಿಗೆ ಒದಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮುಂದುವರಿದು, ದೂರದಾರರು ಲಭ್ಯಪಡಿಸಿರುವ ಮಾಹಿತಿ/ದಾಖಲೆಗಳ ಪ್ರಕಾರ ಕಾಮಗಾರಿಯ ವೆಚ್ಚಗಳ ಬಗ್ಗೆ ಸರಿಯಾಗಿ ನಮೂದಿಸದೇ ಇರುವುದು ಕಂಡು ಬರುತ್ತದೆಯೆಂದು, ಮೇಲ್ಕಂಡ ಮೂವರು ಆರೋಪಿತರ ಸರ್ಕಾರಿ ನೌಕರರಾಗಿದ್ದು, ಅವರುಗಳು ಮೇಲ್ಕಂಡ ಕಾಮಗಾರಿಗಳ ನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ, ಪ್ರಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಈ ರೀತಿಯಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) ನ್ನು ಉಲ್ಲಂಘಿಸಿರುವುದು ಕಂಡು ಬರುತ್ತದೆಯೆಂದು ಅವರುಗಳು ಸಲ್ಲಿಸಿರುವ ವಿವರಣೆಯು ಶಿಸ್ತು ನಡವಳಿಯನ್ನು ಕೈ ಬಿಡಲು ಸೂಕ್ತ ಸಮಾಧಾನಕರವಾಗಿರುವುದಿಲ್ಲವೆಂದು ಆದ್ದರಿಂದ, ಶ್ರೀ ಎಂ.ಎನ್.ಪಾಟೀಲ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ದಿನಾಂಕ:30.9.2015 ರಂದು ನಿವೃತ್ತಿ ಹೊಂದಿರುವುದರಿಂದ ಅವರ ವಿರುದ್ದ ಕ.ನಾ.ಸೇ ನಿಯಮ 214(2)(ಬಿ) ರನ್ವಯ ಮಂಜೂರಾತಿ ನೀಡುವುದರ ಜೊತೆಗೆ ಅವರನ್ನು ಒಳಗೊಂಡಂತೆ ಶ್ರೀ ಎಂ.ಆರ್.ವಡ್ಡರ, ಹಿಂದಿನ ಕಾ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ. ಶ್ರೀ ಕೆ.ಬಿ.ಗಂಜಿಹಾಳ, ಸ.ಕಾ.ಇಂ, ಪಂ.ರಾ.ಇಂ ಉಪ ವಿಭಾಗ, ಯಲಬುರ್ಗಾ. ಈ ಮೂವರ ವಿರುದ್ದ ವಿವರವಾದ ಇಲಾಖೆ ವಿಚಾರಣೆ ನಡೆಸಲು ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತ-1ರವರು ಸರ್ಕಾರವನ್ನು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತ-1ರವರ ವರದಿ ಮತ್ತು ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ದೂರುದಾರರಾದ ಶ್ರೀ ಜಿ.ಎನ್.ಹನುಮಂತಪ್ಪ ತಂದೆ ಗುನ್ನಾಳ ನಾಗಪ್ಪ, ಇವರು ಸಲ್ಲಿಸಿರುವ ದಾಖಲೆಗಳು ಹಾಗೂ ಕಾಮಗಾರಿಗಳು ಛಾಯಾ ಚಿತ್ರಗಳನ್ನು ಗಮನಿಸಿದಾಗ, ಕಾಮಗಾರಿಗಳು ಗುಣಮಟ್ಟದಿಂದ ನಿರ್ಮಾಣಗೊಂಡಿರುವುದು ಕಂಡು ಬರುವುದಿಲ್ಲ. ಸದರಿ ಕಾಮಗಾರಿಯ ಉಸ್ತುವಾರಿಯನ್ನು ವಹಿಸಿದ್ದ (1) ಶ್ರೀ ಎಂ.ಆರ್.ವಡ್ಡರ, ಹಿಂದಿನ ಕಾ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ. (2) ಶ್ರೀ ಕೆ.ಬಿ.ಗಂಜಿಹಾಳ, ಸ.ಕಾ.ಇಂ, ಪಂ.ರಾ.ಇಂ ಉಪ ವಿಭಾಗ, ಯಲಬುರ್ಗಾ. ಮತ್ತು (3) ಶ್ರೀ ಎಂ.ಎಂ.ಪಾಟೀಲ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಬಾಗ, ಕೊಪ್ಪಳ ಇವರುಗಳು ಸದರಿ ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ ಗುಣಮಟ್ಟದಿಂದ ನಿರ್ಮಾಣ ಮಾಡಿರುವುದು ಅನುಮಾನಸ್ಪದವಾಗಿದೆ. ಮೇಲ್ಕಂಡ ಮೂವರು ಸರ್ಕಾರಿ ನೌಕರರಾಗಿದ್ದು ತಮ್ಮ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ತೋರದೆ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) ನ್ನು ಉಲ್ಲಂಘಿಸಿರುವುದು ಕಂಡು ಬರುವುದರಿಂದ ಅವರುಗಳ ವಿರುದ್ದದ ಆರೋಪಗಳಿಗೆ ಸಂಬಂದಿಸಿದಂತೆ ವಿವರವಾದ ಇಲಾಖೆ ವಿಚಾರಣೆಯನ್ನು

---3

ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ಅನುಸಾರ ನಡೆಸುವುದು ಅಗತ್ಯವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 162 ಇಎನ್‌ಕ್ಯೂ 16, ಬೆಂಗಳೂರು, ದಿನಾಂಕ:12.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಎನ್.ಪಾಟೀಲ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಪ್ಪಳ ಇವರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕ.ನಾ.ಸೇ (ವ.ನಿ.ಮೇ) ನಿಯಮಗಳು 1957 ರ ನಿಯಮ 11& 11ಎ ರ ಅನುಸಾರ ನಡೆಸಲು ಕ.ನಾ.ಸೇ ನಿಯಮ 214 (2) (ಬಿ) ರಡಿ ಮಂಜೂರಾತಿಯನ್ನು ನೀಡಿದೆ.

ಶ್ರೀ. ಎಂ.ಎನ್.ಪಾಟೀಲ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಒಳಗೊಂಡಂತೆ, ಶ್ರೀ ಎಂ.ಆರ್.ವಡ್ಡರ, ಹಿಂದಿನ ಕಾ.ಇಂ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೊಪ್ಪಳ ಮತ್ತು ಶ್ರೀ ಕೆ.ಬಿ.ಗಂಜಿಹಾಳ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪ ವಿಭಾಗ, ಯಲಬುರ್ಗಾ ಈ ಮೂವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕ.ನಾ.ಸೇ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ನಡೆಸಲು ಸದರಿ ನಿಯಮಗಳ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1ರವರಿಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ದೇಶ ಪೊತ್ತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
7. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ರವರ ಮುಖಾಂತರ)
8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
9. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
10. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.